# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI





ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 12 Reg. No. : KARBIL / 2005 / 16123 ಆಗಸ್ಟ್ - 2023 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 08 ಪ್ರಕಟಣೆ : 20-08-2023


## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಆಟಿತೊ ಆಟ - ಕೂಟ'




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 23-07-2023ನೇ ರವಿವಾರ 'ಆಟಿತೊ ಆಟ ಕೂಟ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಇತರ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ಚೆನ್ನೆಮಣೆ, ಕಲ್ಲಾಟ, ಕೇರಂ, ಚೆಸ್ ಪಂದ್ಯಾಟವನ್ನು ಉದ್ಘಾಟಿಸಿ, ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶ್ರೀಮತಿ ಪ್ರೀತಿ ಭಟ್, ಚೆಸ್ ಪಂದ್ಯಾಟ ಮತ್ತು ಶ್ರೀ ಜಯಚಂದ್ರ ಬಿ. ವಿ. ಕೇರಂ ಪಂದ್ಯಾಟವನ್ನು ನಡೆಸಿಕೊಟ್ಟರು. ಆಟಿಯ ವಿಶೇಷ ಖಾದ್ಯಗಳನ್ನು ಒಳಗೊಂಡ ಭೋಜನದ ಬಳಿಕ ಮಹಿಳಾ ವೇದಿಕೆಯ ವತಿಯಿಂದ 'ಹಳ್ಳಿ ಉಡುಗೆ' ಸ್ಪರ್ಧೆ ನಡೆಯಿತು.

ಶ್ರೀಮತಿ ಭಾರತಿ ಅನಿಲ್ ಮತ್ತು ಶ್ರೀ ಸಂಜಯ್ ಕುಮಾರ್ ಪಿ. ತೀರ್ಪುಗಾರರಾಗಿ ಸಹಕರಿಸಿದರು. ಬಳಿಕ ಡಾ| ಮೀರಾ ಮತ್ತು ಶ್ರೀಮತಿ ನಯನ ರಾವ್ ಪರಿಸರ ಸ್ನೇಹಿ ತೆಂಗಿನ ನಾರಿನಿಂದ ಚಟ್ಟಿಗಳ ತಯಾರಿ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಸಮಾಜದ ಪ್ರತಿಭೆಗಳಿಂದ 'ಕರೋಕೆ ರಸಮಂಜರಿ' ಜರುಗಿತು. ಝೀ-ಕನ್ನಡ ಸರಿಗಮಪ ದ್ವಿತೀಯ ರನ್ನರ್ ಅಪ್ ಕು| ತನುಶ್ರೀ ಅತಿಥಿಯಾಗಿ ಭಾಗವಹಿಸಿದಳು. ಬಹುಮಾನಗಳನ್ನು ಶ್ರೀ ಸುಬ್ರಹ್ಮಣ್ಯ ಚಾರಿಟೇಬಲ್ ಟ್ರಸ್ಟ್ ನಿರ್ದೇಶಕಿ ಡಾ. ಜಯಲಕ್ಷ್ಮೀ ಪ್ರಾಯೋಜಿಸಿದರು. ಶ್ರೀ ಸಭಾದ ಉಪಾಧ್ಯಕ್ಷರುಗಳಾದ ಶ್ರೀಮತಿ ಸುಮಂಗಲಾ ಪಿ., ಡಾ| ಎ. ಪಿ. ಕೃಷ್ಣ, ಜೊತೆ ಕಾರ್ಯದರ್ಶಿಗಳಾದ ಶ್ರೀ ಅನಿಲ್ ಬಿ. ಎಸ್. ಮತ್ತು ಶ್ರೀ ಚೇತನ್ ಶರ್ಮ ವ್ಯವಸ್ಥೆಗಳಲ್ಲಿ ಸಹಕರಿಸಿದರೆ, ಯುವವೇದಿಕೆ ಅಧ್ಯಕ್ಷ ಶ್ರೀ ಅನಿಲ್ ಎನ್., ಕಾರ್ಯದರ್ಶಿ ಶ್ರೀ ಸಾಯಿಪ್ರಸಾದ್, ಮಹಿಳಾ ವೇದಿಕೆ ಗೌರವಾಧ್ಯಕ್ಷೆ ಶ್ರೀಮತಿ ಕನಕವಲ್ಲಿ ಕೇದಿಗೆ, ಅಧ್ಯಕ್ಷೆ ಶ್ರೀಮತಿ ಕುಸುಮಾ ಎನ್., ಪದಾಧಿಕಾರಿಗಳಾದ ಶ್ರೀಮತಿ ಪುಷ್ಪಾವತಿ ಎಸ್., ಶ್ರೀಮತಿ ಭುವನಾ ಎನ್., ಶ್ರೀಮತಿ ಸ್ನೇಹಲತಾ ಡಿ. ಸ್ಪರ್ಧೆಗಳನ್ನು ಆಯೋಜಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರೆ, ಯುವವೇದಿಕೆ ಉಪಾಧ್ಯಕ್ಷ ಶ್ರೀ ಸುರೇಶ್ ಕೆ. ಧನ್ಯವಾದ ಮಾಡಿದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್



### ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು ✆ : 7337634359

ಶ್ರೀ ಸಭಾ ಪ್ರಾಯೋಜಿತ ಸುಸಜ್ಜಿತ

**ಹಿರಿಯ ನಾಗರಿಕರ ವಸತಿನಿಲಯ ಮತ್ತು**
**ವಿಶೇಷ ಚೇತನರ ಆಶ್ರಯಧಾಮ**

## 'ಶಿವಸದನ' ಲೋಕಾರ್ಪಣೆ

ದಿನಾಂಕ : 27-08-2023, ಆದಿತ್ಯವಾರ ಪೂರ್ವಾಹ್ನ ಗಂಟೆ 11-00
ಸ್ಥಳ : 'ಶಿವಸದನ', ಮುರ, ಪುತ್ತೂರು (ಪುತ್ತೂರು ನಗರ ಸ್ವಾಗತ ಕಮಾನು ಇದರ ಬಳಿ)

ತಾವೆಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ
ನಮ್ಮನ್ನು ಈ ಸಮಾಜಸೇವಾ ಕಾರ್ಯದಲ್ಲಿ ಬೆಂಬಲಿಸಬೇಕಾಗಿ ವಿನಂತಿ.




### ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು





ಸಮಾಜ ಬಾಂಧವರೇ,

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಷಂಪ್ರತಿಯಂತೆ ಈ ಬಾರಿ
ತಾರೀಕು 10-09-2023ನೇ ರವಿವಾರದಂದು

**ಶ್ರೀಕೃಷ್ಣ ಜನ್ಮಾಷ್ಟಮಿಯನ್ನು**

ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತಿದ್ದೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು

ಅದೇ ದಿನ ಬೆಳಗ್ಗೆ ಗಂಟೆ 10-00ರಿಂದ ರೋಟರಿ ಕ್ಲಬ್, ಮಂಗಳೂರು ಹಿಲ್‌ಸೈಡ್ ವತಿಯಿಂದ **ಉಚಿತ ದಂತ, ನೇತ್ರ, E.C.G., ರಕ್ತ ತಪಾಸಣೆ** ಮತ್ತು **ರಕ್ತದಾನ ಶಿಬಿರ** ನಡೆಯಲಿದೆ.

#### ಕಾರ್ಯಕ್ರಮಗಳು

ಬೆಳಗ್ಗೆ 7-30ರಿಂದ 8-30 :
ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ
ಮತ್ತು ಗುರು ಸಪರ್ಯಾ

ಬೆಳಗ್ಗೆ 8-30ರಿಂದ : ಉಪಾಹಾರ

10-00ರಿಂದ : ಭಗವದ್ಗೀತೆ ಪಠನ ಸ್ಪರ್ಧೆ

10 ವರ್ಷದ ಕೆಳಗಿನ ಮಕ್ಕಳಿಗೆ
ಭಗವದ್ಗೀತೆಯ ಧ್ಯಾನಶ್ಲೋಕ ಸ್ಪರ್ಧೆ

10-18 ವರ್ಷದ ವಿಭಾಗ
12ನೇ ಅಧ್ಯಾಯದ ಆರಂಭದ 10 ಶ್ಲೋಕಗಳು

18 ವರ್ಷ ಮೇಲ್ಪಟ್ಟು
12ನೇ ಅಧ್ಯಾಯದ ಆರಂಭದ 10 ಶ್ಲೋಕಗಳು

11-00ರಿಂದ : ಮುದ್ದುಕೃಷ್ಣ ವೇಷ ಸ್ಪರ್ಧೆ
3 ವರ್ಷದೊಳಗಿನ ವಿಭಾಗ
3ರಿಂದ 8 ವರ್ಷದೊಳಗಿನ ವಿಭಾಗ
8ರಿಂದ 12 ವರ್ಷದೊಳಗಿನ ವಿಭಾಗ

11-30ರಿಂದ : ಭಕ್ತಿಗೀತೆ ಸ್ಪರ್ಧೆ
12ರಿಂದ 30 ವರ್ಷದ ಒಳಗಿನ ವಿಭಾಗ
30 ವರ್ಷ ಮೇಲ್ಪಟ್ಟವರ ವಿಭಾಗ

ಮಡಕೆ ಒಡೆಯುವ ಸ್ಪರ್ಧೆ

ಚಕ್ಕುಲಿ ಸಂಖ್ಯೆ ಊಹನೆ ಸ್ಪರ್ಧೆ (ಮುಕ್ತ ವಿಭಾಗ)

ಮಧ್ಯಾಹ್ನ 1-00ರಿಂದ : ಭೋಜನ

ಮಧ್ಯಾಹ್ನ 2-00ರಿಂದ :
ಶಂಖ ಊದುವ ಸ್ಪರ್ಧೆ (ಮುಕ್ತ ವಿಭಾಗ)

2-30ರಿಂದ : ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆ

3-00ರಿಂದ : ಸಾಂಸ್ಕೃತಿಕ ಕಾರ್ಯಕ್ರಮಗಳು

— ಬಹುಮಾನದ ಪ್ರಾಯೋಜಕರು —

ಡಾ. ಜಯಲಕ್ಷ್ಮೀ
ನಿರ್ದೇಶಕಿ, ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ಸಂಪರ್ಕಿಸಿ :

ಶ್ರೀಮತಿ ಕುಸುಮಾ ನವೀನ್‌ಕುಮಾರ್ - 9480760904 | ಶ್ರೀಮತಿ ಪುಷ್ಪಾ ಶ್ರೀನಿವಾಸ್ - 9739155359
ಶ್ರೀ ಅನಿಲ್ ನೆಲ್ಲಿಕುಂಜೆ - 9448815172 | ಶ್ರೀ ಸುರೇಶ್ ಕಡಬ - 9972760673

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :

ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696

ಸಂಪಾದಕರು : ಪಿ. ಶ್ರೀಕಾಂತ ರಾವ್ – 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು

• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ • ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

: 7795116598 : 9343361618

e-mail : jnanashakthisss@gmail.com


## ಶ್ರೀ ಹರ್ಷಕುಮಾರ್ ಕೇದಿಗೆ ದಂಪತಿಯಿಂದ ಕುಟುಂಬದ ಶ್ರೇಯಸ್ಸಿಗಾಗಿ ನವಚಂಡಿಕಾ ಪಾರಾಯಣ ಮತ್ತು ಚಂಡಿಕಾ ಹೋಮ



ಶ್ರೀಮತಿ ಕನಕವಲ್ಲಿ ಮತ್ತು ಶ್ರೀ ಹರ್ಷಕುಮಾರ್ ಕೇದಿಗೆಯವರು ಅವರ ಕುಟುಂಬದವರೆಲ್ಲರ ಸಹಕಾರದಲ್ಲಿ ಮತ್ತು ಶ್ರೀ ಶೃಂಗೇರಿ ಜಗದ್ಗುರುಗಳ ಆದೇಶದಂತೆ, ದಿನಾಂಕ 28–06–2023ರಿಂದ 07–07–2023ರ ವರೆಗೆ, ಕುಟುಂಬದ ಸರ್ವ ಸದಸ್ಯರ ಶ್ರೇಯಸ್ಸನ್ನು ಸಂಕಲ್ಪಿಸಿ, ಕೆಳಗಿನ ಕೇದಿಗೆ ಮೂಲಮನೆಯಲ್ಲಿ, ಪ್ರತಿ ದಿನ ಸಂಜೆ ನಾಲ್ಕು ಗಂಟೆಗೆ ಆರಂಭಿಸಿ, ಸಪ್ತಶತಿ ಸಂಪುಟ ಪಾರಾಯಣ ಹಾಗೂ ಸುವಾಸಿನಿ ಪೂಜೆಯನ್ನು ಮತ್ತು ಮತದಬೆಟ್ಟು ಶ್ರೀ ರಾಜರಾಜೇಶ್ವರೀ ಸನ್ನಿಧಿಯಲ್ಲಿ ದಿನಾಂಕ 09–07–2023ನೇ ಆದಿತ್ಯವಾರ ಸಂಜೆ ನವಚಂಡಿಕಾ ಪಾರಾಯಣ ಹಾಗೂ ದಿನಾಂಕ 10–07–2023ನೇ ಸೋಮವಾರ ಚಂಡಿಕಾ ಹೋಮವನ್ನು ಭಕ್ತಿಪೂರ್ವಕವಾಗಿ ನೆರವೇರಿಸಿದರು.

Muralidhara Rao Adyapadi
Proprietor

Mob : 94480 27259
99803 16434



SPANDANA
Constructions

IInd Floor (202)
'Yashodharathna', Sai Sharada Apts.
Near Sharada Vidyalaya, Kodialbail, Mangaluru - 3

CUSTOMER'S SATISFACTION IS OUR MOTTO

PREETHIKA
AUTOMOBILES
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, H. K. Products, Swiss Auto Products, Power Coils

2493633
9845851573

ॐ

# ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಮೊಬೈಲ್ : 7337634359

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ
ಶೃಂಗೇರಿ ಶ್ರೀ ಶಾರದಾಪೀಠಾಧೀಶ್ವರ
ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ
ತತ್ಕರಕಮಲಸಂಜಾತ ಜಗದ್ಗುರು
ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದೊಂದಿಗೆ

ಶ್ರೀ ಸಭಾ ಪ್ರಾಯೋಜಿತ ಸುಸಜ್ಜಿತ

## ಹಿರಿಯ ನಾಗರಿಕರ ವಸತಿನಿಲಯ

ಮತ್ತು

## ವಿಶೇಷ ಚೇತನರ ಆಶ್ರಯಧಾಮ

# 'ಶಿವಸದನ' ಲೋಕಾರ್ಪಣೆ

ದಿನಾಂಕ : **27-08-2023**, ಆದಿತ್ಯವಾರ ಪೂರ್ವಾಹ್ನ ಗಂಟೆ **11-00**
ಸ್ಥಳ : 'ಶಿವಸದನ', ಮುರ, ಪುತ್ತೂರು (ಪುತ್ತೂರು ನಗರ ಸ್ವಾಗತ ಕಮಾನು ಇದರ ಬಳಿ)

ನೂತನ ಆಫೀಸ್ ಉದ್ಘಾಟನೆ
**ಶ್ರೀ ಪ್ರದೀಪ್ ಕುಮಾರ್ ಪಂಜ**
ಚೇರ್‌ಮೆನ್, ಕರ್ನಾಟಕ ಬ್ಯಾಂಕ್ ಲಿ., ಮಂಗಳೂರು

ಫಲಕ ಅನಾವರಣ
**ಶ್ರೀ ಶೇಖರ್ ರಾವ್**
ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಬ್ಯಾಂಕ್, ಮಂಗಳೂರು

ವಿಶೇಷ ಚೇತನರ ಆಶ್ರಯಧಾಮ ಉದ್ಘಾಟನೆ :
**ಶ್ರೀ ಅಶೋಕ್ ಕುಮಾರ್ ರೈ**, ಶಾಸಕರು, ಪುತ್ತೂರು

ಅಭ್ಯಾಗತರು :
**ಶ್ರೀ ವಿನಯ ಕುಮಾರ್ ಕಲ್ಲೇಗ**
ಅಧ್ಯಕ್ಷರು, ಕಬಕ ಗ್ರಾಮ ಪಂಚಾಯತ್
**ಶ್ರೀ ಬೆಳ್ಳೆ ರವೀಂದ್ರನಾಥ ರಾವ್**
ಅಧ್ಯಕ್ಷರು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಂಗಳೂರು
**ಶ್ರೀ ಪಿ. ಸತೀಶ್ ರಾವ್, ಕಬಕ**
ಉಪಾಧ್ಯಕ್ಷರು, ಪುತ್ತೂರು ವಿದ್ಯಾವರ್ಧಕ ಸಂಘ
**ಶ್ರೀ ಎಂ. ಎಸ್. ರಘುನಾಥ ರಾವ್**, ಪುತ್ತೂರು

ತಾವೆಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ
ನಮ್ಮನ್ನು ಈ ಸಮಾಜಸೇವಾ ಕಾರ್ಯದಲ್ಲಿ ಬೆಂಬಲಿಸಬೇಕಾಗಿ ವಿನಂತಿ.

**ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು**
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು
ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್, ಮಂಗಳೂರು
ಹಾಗೂ ಶಿವಸದನ ಚಾರಿಟೇಬಲ್ ಟ್ರಸ್ಟ್, ಮುರ, ಪುತ್ತೂರು

# SHREE SUBRAHMANYA SABHA CHARITABLE TRUST (R.)

Kudpi Padmanabhayya Gardens, KODIALBAIL, MANGALORE - 575 003 ✆ : 0824 - 2493978

## SHIVA SADANA – AN APPEAL




Shree Subrahmanya Sabha acquired Shiva Sadana hostel building from Shree Shiva Brahmana Samaja Seva Sangha, Puttur, developing this as a Senior Citizen Home and a home for 'SPECIALLY ABLED' is the FLAGSHIP PROJECT of our Sabha.

In the First Phase to provide lift facility in the building an Annex building with ground plus 4 floors with each floor of 1100 sqft was added. In the ground floor of the Annex we have the main lobby and the office room.

In each of the upper 4 floors we have a studio apartment of 575 sqft and an additional room.

In the 2nd phase the work of putting up the 3rd and 4th floors to the building to house the home for the 'SPECIALLY ABLED' was taken up.

Now we have created facility for 54 Senior Citizen, 56 'SPECIALLY ABLED' persons and 30 Nurses / Care Providers a total of 140 persons.

The completed building with ground plus 4 floors has built up area of 40,500 sqft. A passenger lift of '18 Persons Capacity' has been installed. At present there are 40 Senior Citizens and care providers. The home for the 'SPECIALLY ABLED' will be inaugurated in August 23.

A sum of Rs. 500 Lakhs has been already invested in this project till date. A sum of Rs. 300 Lakhs has been received as donations from our community. 21 donors have each donated a sum Rs. 5 Lakhs and sponsored a room in memory of their family elders. Many have donated Rs. 1 Lakhs on occasion of marriages and other family celebrations. We have also received many other donations in cash and kind. We have availed loan of Rs. 200 Lakhs from Shree Subrahmanya Sahakara Sangha to finance the balance cost.

A 40 KVA electrical transformer has to installed and other pending works require a sum of Rs. 10 Lakhs.

Till now the facilities in the Senior Citizen Home has been made available at a cost reachable to middle class and lower middle class persons. Once our loans are cleared it is proposed to keep 10% seats free for persons of below poverty line. This project is in its final stages of completion. We have collect a sum of Rs. 210 Lakhs as explained above. We therefore request for your kind donation to this socially usefull project.

**President & All Board Members**













**For further information :**

**Sri Karun Rao Belle ✆ : 7337634359**

**Sri Srikanth Rao P. ✆ : 9343361618**

| | |
|---|---|
| A/c No. | : 1117102000002196 |
| A/c. Name | : Shree Subrahmanya Sahakara Sangha |
| Type | : Current Account Bank : IDBI Bank |
| IFSC | : IBKL0001117 |
| Contact No. | : 0824 - 2491895 |

***Sir, Please contact us by phone about your donation by which we can confirm your remittance.***

# ನೃತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಪ್ರೊ. ರಾಮಮೂರ್ತಿ ರಾವ್ ಆಯ್ಕೆ



ದಶಂಬರ ತಿಂಗಳ 24 ಮತ್ತು 25ರಂದು ಉಡುಪಿಯಲ್ಲಿ ಜರಗಲಿರುವ ಕರಾವಳಿಯ ನೃತ್ಯ ಕಲಾವಿದರ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಮೈಸೂರಿನ ನಾಟ್ಯಾಚಾರ್ಯ ಪ್ರೊ. ರಾಮಮೂರ್ತಿ ರಾವ್ ಅವರನ್ನು ಇತ್ತೀಚೆಗೆ ನಡೆದ ಸಮಿತಿಯ ಸಭೆಯಲ್ಲಿ ಸರ್ವಾನುಮತದಿಂದ ಆರಿಸಲಾಯಿತು.

ಮೂಲತ: ಉಡುಪಿಯವರಾದ ರಾಮಮೂರ್ತಿ ರಾಯರು ನೃತ್ಯ ಕ್ಷೇತ್ರದ ಅಸಾಧಾರಣ ಪ್ರತಿಭೆ. ನೃತ್ಯ ಕಲಾವಿದನಾಗಿ, ನೃತ್ಯಗುರುವಾಗಿ, ನಿರ್ದೇಶಕನಾಗಿ, ಕಲಾ ವಿಮರ್ಶಕನಾಗಿ, ಲೇಖಕನಾಗಿ, ಸಂಘಟಕನಾಗಿ, ಪರೀಕ್ಷಾ ಮಂಡಳಿ, ಪಠ್ಯಪುಸ್ತಕ ರಚನಾ ಸಮಿತಿ, ಸಂಗೀತ ನೃತ್ಯ ಅಕಾಡೆಮಿ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದ ಅನುಭವಿ ಹಾಗೂ ಮೇಧಾವಿ.

ಕಲೆಗೆ ಸಂಬಂಧಿಸಿದ ಗ್ರಂಥಗಳ ಸಂಪಾದಕತ್ವ ಅಲ್ಲದೆ ನೃತ್ಯರಂಗಕ್ಕೆ ಉಪಯುಕ್ತವಾದ ಗ್ರಂಥಗಳ ಲೇಖಕರೂ ಹೌದು. ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ವಿದ್ವಾಂಸರು. ಪ್ರಸ್ತುತ ನೃತ್ಯರಂಗ, ಸಾಹಿತ್ಯ ಕ್ಷೇತ್ರ, ಸಮಾಜಮುಖಿ ಸೇವೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ಶ್ರೀಯುತರು ತನ್ನ ಬಹುಮುಖ ಸೇವೆಗಾಗಿ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳ ಸರದಾರನಾಗಿ ನೃತ್ಯ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿದ ಕರಾವಳಿಯ ಕಲಾರತ್ನರಾಗಿದ್ದಾರೆ.

**ಅಧ್ಯಕ್ಷರು, ಕಾರ್ಯಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ,**
**ಪದಾಧಿಕಾರಿಗಳು, ಸರ್ವಸದಸ್ಯರು – ನೃತ್ಯೋತ್ಕರ್ಷ–2023**

## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ

**ಕೋಂ ಕೆ. ಸದಾಶಿವ ಶಾಸ್ತ್ರಿ, 3–68 (7) ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ**
**ಕುಳಾಯಿ – 575 019 ಮೊಬೈಲ್ : 8762235801**

2022–23ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರೌಢಶಾಲಾ (ಎಸ್.ಎಸ್.ಎಲ್.ಸಿ.) ಮತ್ತು ಪದವಿಪೂರ್ವ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ (ಪಿ.ಯು.ಸಿ.) ವಿಶಿಷ್ಟ ಶ್ರೇಣಿಯಲ್ಲಿ (85% ಅಧಿಕ) ತೇರ್ಗಡೆಯಾದ ವಿದ್ಯಾರ್ಥಿ / ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು–3 ಇಲ್ಲಿ ತಾ. 29–10–2023 ರಂದು ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದ. ಕ. ಮತ್ತು ಉಡುಪಿ ಜಿಲ್ಲಾ ಅರ್ಹ ಆಸಕ್ತ ವಿದ್ಯಾರ್ಥಿ / ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ತಾ. 30–9–2023ರ ಒಳಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.


**ಕೆ. ಸದಾಶಿವ ಶಾಸ್ತ್ರಿ ✆ : 8762235801**

# ಕಡಬ ಸ್ಥಾನಿಕ ಸಂಘ ಇದರ ಪುನಶ್ಚೇತನ ಹಾಗೂ ಮಹಿಳಾ ವೇದಿಕೆ ಸಮಿತಿ ರಚನೆ




ಕಡಬ ಸ್ಥಾನಿಕ ಸಂಘ ಇದರ ಪುನಶ್ಚೇತನ ಹಾಗೂ ಮಹಿಳಾ ವೇದಿಕೆ ಸಮಿತಿ ರಚನೆ ಕಾರ್ಯಕ್ರಮವು ದಿನಾಂಕ 29–07–2023ರಂದು ಕಡಬದ ಶ್ರೀ ಮಹಾಗಣಪತಿ ಶ್ರೀಕಂಠಸ್ವಾಮಿ ದೇವಳದ ಸಭಾಂಗಣದಲ್ಲಿ ನೆರವೇರಿತು. ಕುಮಾರಿ ಶ್ವೇತ ಅವರ ಪ್ರಾರ್ಥನೆಯೊಂದಿಗೆ, ಶ್ರೀ ಸೀತಾರಾಮ ರಾವ್ ಪುತ್ರಬೈಲು ಇವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸ್ಥಾನಿಕ ಸಂಘ ಕಡಬ ಸಮಿತಿಯ ಗೌರವಾಧ್ಯಕ್ಷರಾಗಿ ಶ್ರೀ ಸೀತಾರಾಮ ರಾವ್ ಪುತ್ರಬೈಲು, 2023–2024ನೇ ಸಾಲಿನ ಅಧ್ಯಕ್ಷರಾಗಿ ಶ್ರೀ ಪದ್ಮನಾಭಯ್ಯ ಉಬರಳೆ, ಉಪಾಧ್ಯಕ್ಷರಾಗಿ ಶ್ರೀ ಜನಾರ್ದನ ರಾವ್ ಆಕಿರೆಕಾಡು, ಕಾರ್ಯದರ್ಶಿಯಾಗಿ ಶ್ರೀ ಪ್ರಸನ್ನ ಕುಮಾರ್, ಪುತ್ರಬೈಲು, ಜತೆಕಾರ್ಯದರ್ಶಿಯಾಗಿ ಶ್ರೀ ರಾಜೇಶ್ ರಾವ್ ತಲೇಕಿ, ಕೋಶಾಧಿಕಾರಿಯಾಗಿ ಶ್ರೀ ರಾಜೇಶ್ ಕೋಲ್ಪೆ, ಗೌರವ ಸಲಹೆಗಾರರಾಗಿ ಶ್ರೀ ಹರಿಕಿರಣ ಕೊಯಿಲ ಮತ್ತು ಕಾನೂನು ಸಲಹೆಗಾರರಾಗಿ ಶ್ರೀ ರವಿಕಿರಣ್ ಕೊಯಿಲ ಇವರು ಆಯ್ಕೆಯಾಗಿರುತ್ತಾರೆ.

ಮಹತೀ ಸ್ಥಾನಿಕ ಮಹಿಳಾ ವೇದಿಕೆ ಸಮಿತಿಯ ಗೌರವಾಧ್ಯಕ್ಷರಾಗಿ ಶ್ರೀಮತಿ ಶಾಂತಿ ಗೋಪಾಲ್ ರಾವ್ ಬಿಳಿನೆಲೆ, 2023–2024ನೇ ಸಾಲಿನ ಅಧ್ಯಕ್ಷರಾಗಿ ಶ್ರೀಮತಿ ಹರ್ಷಿಣಿ ಶಿವಕುಮಾರ್ ಪಟ್ಟ, ಉಪಾಧ್ಯಕ್ಷರಾಗಿ ಶ್ರೀಮತಿ ವಾಣಿ ಜಡೆಮನೆ, ಕಾರ್ಯದರ್ಶಿಯಾಗಿ ಶ್ರೀಮತಿ ಪ್ರಮೀಳ ಸನತ್ ಕುಮಾರ್ ಬಿಳಿನೆಲೆ, ಕೋಶಾಧಿಕಾರಿಯಾಗಿ ಶ್ರೀಮತಿ ಪದ್ಮಿನಿ ರವಿಕಿರಣ್‌ರವರು ಆಯ್ಕೆಯಾಗಿರುತ್ತಾರೆ. ಕಡಬ, ಸುಬ್ರಹ್ಮಣ್ಯ, ಉಪ್ಪಿನಂಗಡಿ, ರಾಮಕುಂಜ ಹೀಗೆ ಸುತ್ತಮುತ್ತಲಿನ ಸುಮಾರು 40 ಸ್ಥಾನಿಕ ಬಂಧುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
**ಶ್ರೀ ಗಣೇಶ ಕೃಪಾ, ಪೃಥ್ವಿ ಲೇ ಔಟ್, ಕೂಳೂರು, ಮಂಗಳೂರು - 575 013**



# ಜಿರಳೆ ಪುರಾಣ (ಹಾಸ್ಯ ಬರಹ)



ಏನಪ್ಪಾ ಇದು ಜಿರಳೆ ಪುರಾಣ ಅಂತ ಅಂದುಕೊಳ್ಳುತ್ತಾ ಇದ್ದೀರಾ! ಸಾಮಾನ್ಯವಾಗಿ ಯುವತಿಯರು ಮತ್ತು ಮಹಿಳೆಯರಿಗೆ ಈ ಜಿರಳೆ ಅಂದರೆ ಒಂಥರಾ ಭಯವೇ ಅಲ್ವಾ. ಮ್ಯಾಗಜ಼ೀನ್‌ಗಳಲ್ಲಿ ಬರುವ ಕಾರ್ಟೂನ್‌ಗಳಲ್ಲಿ ಅಥವಾ ತಮಾಷೆಯ ವೀಡಿಯೋಗಳಲ್ಲಿ ಧೈರ್ಯಶಾಲಿ ಹೆಣ್ಣೊಬ್ಬಳು ಇಲಿ, ಜಿರಳೆ, ಹಲ್ಲಿಗಳಿಗೆ ಹೆದರುವ ಪುಕ್ಕಲಾಗಿರುವ ರೀತಿಯಲ್ಲಿಯೇ ಚಿತ್ರಿಸಿರುವುದನ್ನು ನೋಡಿರುತ್ತೀರಾ. ಜಿರಳೆ ಸರ್ವವ್ಯಾಪಿ. ಇದಕ್ಕೆ ಹಳ್ಳಿಗಳು ಅಥವಾ ನಗರಗಳೆಂಬ ಬೇಧವಿಲ್ಲ. ಎಲ್ಲರ ಮನೆಗಳಲ್ಲಿ ಆಡಗಿಕೊಂಡಿರುತ್ತದೆ. ಯಾವುದೇ ಕಂಪೆನಿಯ ಸ್ಪ್ರೇ ತಂದು ಹೊಡೆದರೂ ತನ್ನ ಆಂಟೆನಾದಂತಹ ಮೀಸೆಗಳನ್ನು ಆಡಿಸುತ್ತಾ ಮತ್ತೆ ಪ್ರತ್ಯಕ್ಷವಾಗಿಯೇ ಬಿಡುತ್ತದೆ. ನಮ್ಮ ಮನೆಯಲ್ಲಿ ಜಿರಳೆಗಳೇ ಇಲ್ಲ ಅಂತ ಯಾರಾದರೂ ಧೈರ್ಯದಿಂದ ಹೇಳಲು ಸಾಧ್ಯವೇ!

ಬೆಳಕು ಬೀಳದ, ಕತ್ತಲೆ ಇರುವ, ಮುಚ್ಚಿದ, ಸ್ವಚ್ಛ ಇರದ ಜಾಗಗಳಲ್ಲಿ ಇವುಗಳ ವಾಸ. ಅದರಲ್ಲೂ ಮುಚ್ಚಿರುವ ಕಿಚನ್ ಕಬೋರ್ಡ್‌ಗಳು ಇವುಗಳ ಇಷ್ಟದ ತಾಣ. ಹದಿನೈದು ದಿನಕ್ಕೊಮ್ಮೆ ತಪ್ಪಿದರೆ ತಿಂಗಳಿಗೊಮ್ಮೆಯಾದರೂ ಸ್ವಚ್ಛ ಮಾಡದೇ ಹೋದರೆ ಗಲೀಜು ಮಾಡಿ ಹಾಕಿ ಬಿಡುತ್ತವೆ. ಟಿ.ವಿ.ಯಲ್ಲಿ ಮಗನಿಗೆ ಫುಡ್ ಪಾಯ್ಸನ್ ಅಂತ ಹೇಳಲು ಪ್ರಿನ್ಸಿಪಾಲ್ ಬಳಿ ಹೋಗುವ ಅಮ್ಮನ ಜಾಹೀರಾತು ನೆನಪಾಗಿರಬೇಕು ನಿಮಗೀಗ. ಬರಿ ನೆಲದಲ್ಲಿ ಹರಿದಾಡುವುದಷ್ಟೇ ಅಲ್ಲ. ಇವುಗಳಿಗೆ ಆ ಭಗವಂತ ರೆಕ್ಕೆಗಳನ್ನು ಬೇರೆ ದಯಪಾಲಿಸಿದ್ದಾನೆ. ಎಲ್ಲೋ ಕಂಡಿತೆಂದು ಹಿಡಿಸೂಡಿಯೋ, ಸ್ಪ್ರೇಯೋ ತರಲು ಹೋಗಿ ಬರುವುದರೊಳಗೆ ಅವುಗಳು ಅಲ್ಲಿಂದ ನಾಪತ್ತೆ. ಕೈಗೆ ಸಿಕ್ಕಿದ ಜಿರಳೆ (ಬಾಯಿಗೆ ಅಲ್ಲ ಮಾರ್‍ರೆ!) ಪೆಟ್ಟಿಗೆ ಸಿಗುವುದಿಲ್ಲ.

ಈ ಜಿರಳೆಗಳಿಗೆ ಒಂದು ವಿಶಿಷ್ಟವಾದ ಗುಣವುಂಟು. ಅದಕ್ಕೆ ಒಳತೂರಲು ಎಲ್ಲಾದರೂ ಆಗುವುದಾದರೆ ತಮ್ಮ ಮೀಸೆ ತೂರಿಸಲು ಆಗುವಷ್ಟು ಜಾಗ ಸಾಕಂತೆ. ಇಡೀ ದೇಹವನ್ನು ತೂರಿಸಿ ನುಗ್ಗುವ ಛಾತಿ ಇದೆಯಂತೆ. ಸುಳ್ಳಲ್ಲ ಅನ್ನಿಸುತ್ತದೆ. ಬೆರಳು ತೋರಿದರೆ ಹಸ್ತ ನುಂಗುವ ಜಾತಿ ಅನ್ನುತ್ತಾರಲ್ವಾ ಹಾಗೆ.

ನನಗೆ ಈ ಜಿರಳೆ ನೋಡಿದರೆ ಸಿಟ್ಟು ಮತ್ತು ಹೇವರಿಕೆ. ಹಾಗೆ ನೋಡಿದರೆ ಹಳ್ಳಿಯಲ್ಲಿ ಬೆಳೆದವರೆಲ್ಲರಿಗೂ ಈ ಜಿರಳೆ, ಇಲಿ, ಹಲ್ಲಿ ಇತ್ಯಾದಿ ಎಲ್ಲಾ ಸಾಮಾನ್ಯವೇ ಬಿಡಿ. ನಾಯಿ, ಬೆಕ್ಕುಗಳ ತರಹವೇ. ಎಲ್ಲಾದರೂ ನೋಡಿ ಹೆದರಿ ಔಚ್! ಅನ್ನುತ್ತಾ ಹೌಹಾರಿದರೆ 'ಎಂತದಾ! ಅದಕ್ಕೆಲ್ಲಾ ಹೆದರುವುದಾ!' ಅಂತ ನಗುತ್ತಾರೆ ನೋಡಿದ ಹಿರಿಯರು.

ಜಿರಳೆಯ ಬಗ್ಗೆ ಸ್ವಲ್ಪ, ಸ್ವಲ್ಪ ಏನು ಬಹಳವೇ ಭಯ ಹುಟ್ಟಿಸಿದ ಒಂದು ಘಟನೆ ನಾನು ಚಿಕ್ಕವಳಿರುವಾಗ ನಮ್ಮ ಪಕ್ಕದ ಊರಲ್ಲಿ ನಡೆದಿತ್ತು. ಒಬ್ಬರು ಗಂಡಸು ರಾತ್ರಿ ಮಲಗಿರುವಾಗ ಜಿರಳೆಯೊಂದು ಕಿವಿಯೊಳಗೆ ಹೋಗಿತ್ತಂತೆ. ಹೊರಗೆ ಬರಲೇ ಇಲ್ಲ. ಕೆಲವೊಮ್ಮೆ ಇರುವೆ ಹೋದರೆ ಕಿರಿ ಕಿರಿ ಅನ್ನಿಸಿದಾಗ ಉಪ್ಪು ನೀರು ಹಾಕಿದರೆ ಸತ್ತು ಹೊರಗೆ ಬರುತ್ತದೆ. ಹಾಗೆ ಮಾಡಿದರೂ ಜಿರಳೆ ಹೊರಗೆ ಬರಲಿಲ್ಲ. ಕಿವಿಗೆ ಚಿಕ್ಕದೇನಾದರೂ ಹೋದರೂ ಎಷ್ಟು ಕಿರಿಕಿರಿ ಅನ್ನಿಸುತ್ತದೆ ಅಂತ ಅನುಭವಿಸಿದವರಿಗೇ ಗೊತ್ತು. ಈ ಆಸಾಮಿಗೆ ಅದೆಂತಹಾ ಗಾಢ ನಿದ್ದೆಯೋ, ಜಿರಳೆ ಕಿವಿಯೊಳಗೆ ಹೋಗಿದ್ದೂ ಗೊತ್ತಿಲ್ಲ. ಮತ್ತೆ ಮುಂದೇನು?. ಸವಾರಿ ಡಾಕ್ಟರ್ ಹತ್ತಿರವೇ ಹೋಯಿತು. ಕೊನೆಗೆ ಆಪರೇಷನ್ ಮಾಡಿಯೇ ಆ ಜಿರಳೆಯನ್ನು ಹೊರ ತೆಗೆದರಂತೆ. ಇದನ್ನು ಕೇಳಿದ ಹಲವು ದಿನಗಳವರೆಗೆ ನಾವೆಲ್ಲ ರಾತ್ರಿ ಕಿವಿಗೆ ಹತ್ತಿ ಇಟ್ಟುಕೊಂಡೇ ಮಲಗುತ್ತಿದ್ದೆವು. ಅಷ್ಟು ಭಯ ಕಾಡಿತ್ತು.

ಹಗಲು ಹೊತ್ತಿನಲ್ಲಿ ಸುಮ್ಮನೆ ಎಲ್ಲೋ ಅಡಗಿರುವ ಈ ಜಿರಳೆಗಳು ರಾತ್ರಿ ಮಾತ್ರ ಅಲ್ಲಿ ಇಲ್ಲಿ ನಿಶಾಚರ ಪ್ರಾಣಿಗಳ ಹಾಗೆ ಅಲೆದಾಡಲು ಶುರು ಮಾಡುತ್ತವೆ. ಅದರಲ್ಲೂ ಅಪ್ಪಿ ತಪ್ಪಿ ಹಗಲಲ್ಲಿ ಸಿಕ್ಕಿದರೆ ನಾನಂತೂ ಸ್ಪ್ರೇ ಹುಡುಕಲು ಹೋಗುವುದೇ ಇಲ್ಲ. ಹಿಡಿಸೂಡಿ ಹತ್ತಿರವಿದ್ದರೆ ಸರಿ. ಇಲ್ಲದಿದ್ದರೆ ನ್ಯೂಸ್ ಪೇಪರೋ, ತೆಂಗಿನಕಾಯೋ ಕೈಗೆ ಸಿಕ್ಕಿದನ್ನು ಗುರಿ ತಪ್ಪದಂತೆ ರಭಸದಿಂದ ಹೊಡೆದು ಅದು ಗತ ಪ್ರಾಣವಾಗುವುದನ್ನು ನೋಡಿದ ಮೇಲೆ ಪೇಪರಿನಿಂದ ಅದನ್ನು ಹಿಡಿದು ಹೊರಗೆ ಎಸೆದರೆ ಒಂದು ಸಮಾಧಾನ. ಒಂದು ವೇಳೆ ಅಕಸ್ಮಾತ್ ಅದು ತಪ್ಪಿಸಿಕೊಂಡರೆ ಛೇ ಅನ್ನುತ್ತಾ ಪೇಚಾಡಿಕೊಳ್ಳುವುದಷ್ಟೇ ಉಳಿಯುತ್ತದೆ. ಮತ್ತೆಲ್ಲಿ ಹುಡುಕಿದರೂ ಕಣ್ಣಿಗೆ ಕಾಣದಂತೆ ಅದು ಮಾಯವಾಗಿರುತ್ತದೆ.

ತಿಂಗಳ ಅಡುಗೆ ಮನೆ ಸ್ವಚ್ಛತೆಯ ಸಮಯದಲ್ಲಿ ಸ್ಪ್ರೇ ಹೊಡೆದರೆ ಅಲ್ಲಿಯದ್ದು ಮಾತ್ರವಲ್ಲ, ಇಡೀ ಮನೆಯ ಜಿರಳೆಗಳಿಗೆ ಪ್ರಾಣಸಂಕಟ ಶುರುವಾಗುತ್ತದೆ. ಅವು ಮದ್ಯ ಕುಡಿದು ನಶೆಯಲ್ಲಿ ತೂರಾಡಿದಂತೆ ಓಲಾಡುತ್ತಾ ಆಚೀಚೆ ಓಡುತ್ತವೆ. ಆ ಘಾಟಿನ ವಾಸನೆ ನಮಗೇ ತಡೆಯಲಾಗುವುದಿಲ್ಲ. ಇನ್ನು ಅವುಗಳ ಪಾಡೇನು ಅಲ್ಲವೇ.

ಚೀನಾದವರು ಇದನ್ನು ಚಕ್ಕುಲಿಯ ಹಾಗೆ ಕರಿದು ತಿನ್ನುತ್ತಾರೆ ಅಂತೆ. ಛೀ ಛೀ ಗಲೀಜು ಅನ್ನುತ್ತೇವೆ ನಾವು, ನೀವೆಲ್ಲ. ನಮ್ಮ ತಾಯಿಯ ಬಾಲ್ಯ ಕಾಲದಲ್ಲಿ ಮನೆ ಮನೆಯಿಂದ ಜಿರಳೆ ಹಿಡಿದುಕೊಂಡು ಹೋಗುವವರೂ ಬರುತ್ತಾ ಇದ್ದರಂತೆ. ಅವರಿಗೆ ಚೈನಾದವರು ಅಂತಲೇ ಕರೆಯುತ್ತಾ ಇದ್ದರು ಅಂತ ಹೇಳಿದಾಗ ನಾನು ನಂಬಲೇ ಇಲ್ಲ. ಆ ಸಮಯದಲ್ಲೇ ಚೀನಾದಲ್ಲಿ ಆಹಾರ ಅಭಾವ ಇದ್ದು ಸಿಕ್ಕ ಸಿಕ್ಕದನ್ನೆಲ್ಲಾ ತಿನ್ನುವುದು ಅಭ್ಯಾಸವಾಗಿರಬಹುದು. ಏನೋ, ಯಾರಿಗೆ ಗೊತ್ತು. ನಮಗೆ ಗಲೀಜು, ಅವರಿಗೆ ಅದು ಆಹಾರ ಪದ್ಧತಿಯ ಒಂದು ಭಾಗ.

ಓ ಅಲ್ಲೊಂದು ಜಿರಳೆ ಕಾಣ್ತಾ ಇದೆ. ಹೊಡೆಯಲು ಹಿಡಿಸೂಡಿ ತೆಗೆಯಬೇಕು. ಬರ್ಲಾ... ಜಿರಳೆ ಪುರಾಣ ಮುಕ್ತಾಯ.

***– ಶ್ರೀಮತಿ ರಶ್ಮಿ ಉಳಿಯಾರು, ಬೆಂಗಳೂರು***

Celebrating 60 Year 1963-2023
RAJESH POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

Prop. : P. Srikanth Rao
M/s. SAMARPAN
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4

VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)

ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
9686258216

9972989678
9448184174
574 241

Sri Hari Adyapady
Proprietor
SHIVA ELECTRICALS
2nd Floor, Ossasm Complex, Church Building
Main Road, BAJPE, MANGALORE
We undertake all types of Electrical, Plumbing and Sanitary works

## ಅಪಾರಕೀರ್ತಿ ಗಳಿಸಿ...



**ಕು। ಮೇಘನಾ ಕೊಯಿಲ** ಬೆಂಗಳೂರಿನ ಕೃಷಿವಿಜ್ಞಾನ ವಿಶ್ವವಿದ್ಯಾನಿಲಯದಿಂದ ಬಿ.ಟೆಕ್. ಪದವಿ ಪಡೆದಿದ್ದಾಳೆ. ಇವಳು ಶ್ರೀ ಹರಿಕಿರಣ್ ಮತ್ತು ಶ್ರೀಮತಿ ಅನುರಾಧರವರ ಸುಪುತ್ರಿ.

***



**ಶ್ರೀಮತಿ ಸ್ನೇಹ ಸುಬ್ರಹ್ಮಣ್ಯ ರಾವ್** ಇವರು ಮಂಗಳೂರಿನ ಯೆನೆಪೋಯ ವಿಶ್ವವಿದ್ಯಾಲಯದ 'Allied Health and Basic Science' ವಿಭಾಗದಲ್ಲಿ ಡಾ। ರೇಖಾ ಪಿ. ಡಿ. ಇವರ ಮಾರ್ಗದರ್ಶನದಲ್ಲಿ 'ENHANCING THE SUSTAINED RELEASE OF GROWTH FACTORS FROM PLATELETS USING NATURAL SULPHATED POLYSACCHARIDE FOR TREATING CHRONIC WOUNDS' ಎಂಬ ವಿಷಯದಲ್ಲಿ ತಮ್ಮ ಪಿ.ಎಚ್.ಡಿ. ಪ್ರಬಂಧವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತಾರೆ. ತಮ್ಮ ಪದವಿಯನ್ನು ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು, ಸ್ನಾತಕೋತ್ತರ ಪದವಿಯನ್ನು ಕೊಣಾಜೆಯ ಮಂಗಳ ಗಂಗೋತ್ರಿಯಲ್ಲಿ ಪೂರೈಸಿರುವ ಇವರು ಮಂಗಳೂರಿನಲ್ಲಿರುವ ಶ್ರೀ ಎಂ. ಕೆ. ಸುಬ್ರಹ್ಮಣ್ಯ ರಾವ್ ಮತ್ತು ಶ್ರೀಮತಿ ಸುಭದ್ರಾ ಎಸ್. ರಾವ್ ಇವರ ಪುತ್ರಿಯಾಗಿದ್ದು, ಬೆಂಗಳೂರಿನ ಶ್ರೀ ಸುಬ್ರಹ್ಮಣ್ಯ ಎಚ್. ಹೆಬ್ಬಾರ್ ಇವರನ್ನು ವಿವಾಹವಾಗಿ ಪ್ರಸ್ತುತ ಅಮೇರಿಕಾದ ಟೆಕ್ಸಾಸ್‌ನಲ್ಲಿ ವಾಸವಾಗಿದ್ದಾರೆ.

***



ಮೊರಜೆ ಶ್ರೀ ದೇವರಾಯ ರಾವ್ ಮತ್ತು ದಿ। ಸುನಂದ ರಾವ್ ಹಾಗೂ ಪುತ್ತೂರಿನ ಶ್ರೀ ಎನ್. ಕೆ. ಜಗನ್ನಿವಾಸ್ ರಾವ್ ಮತ್ತು ಶ್ರೀಮತಿ ಗೀತಾಮಣಿ ಇವರ ಮೊಮ್ಮಗಳು **ಕು। ಸಿಂಚನ ರಾವ್ ಎಂ.ಆರ್**. ಇವಳು CBSE 10th ಬೋರ್ಡ್ 2022–23ರ ಪರೀಕ್ಷೆಯಲ್ಲಿ 96.4% ಅಂಕವನ್ನು ಪಡೆದಿದ್ದಾಳೆ. ಇವಳು ಶ್ರೀ ರಾಘವೇಂದ್ರ ರಾವ್ ಎಂ. ಡಿ. ಮತ್ತು ಶ್ರೀಮತಿ ಶ್ವೇತಾ ರಾಘವೇಂದ್ರ ರಾವ್ ಇವರ ಸುಪುತ್ರಿ.

Prop. : SUDHAKAR BELLE
: 9845193103/ 9481563103
KARAN DIGITAL STUDIO
Sadasukh Building Nr. Postoffice, Padubidri - 574 111
Opp. Busstand Belman
All Marriage & Other functions Photography & Videography Available

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ –
G. K. KOLPE
House No. 7–3–31–D1, 'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

ಪತ್ರಿಕೆಗೆ ಶುಭ ಹಾರೈಸುವವರು–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮಂಗಳೂರು - 575 003

ಪತ್ರಿಕೆಗೆ ಶುಭ ಹಾರೈಸುವವರು–

PRAVEEN KUMAR ADYAPADY
NOTARY & ADVOCATE
MANGALORE OFFICE
BAJPE OFFICE
CHURCH BUILDING, MAIN ROAD, BAJPE
We undertake : Civil, Criminal, Motor Vehicles, A.C., D.C. Cases, Land Conversion, Registration etc.

## ಆಲಂಪಾಡಿ ವೆಂಕಟೇಶ ಶಾನುಭಾಗ್ ಟ್ರಸ್ಟ್, ಕಾಸರಗೋಡು ಇದರ ವತಿಯಿಂದ ಸನ್ಮಾನ




ಆಲಂಪಾಡಿ ವೆಂಕಟೇಶ ಶಾನುಭಾಗ್ ಟ್ರಸ್ಟ್, ಕಾಸರಗೋಡು ಇದರ ವತಿಯಿಂದ ಅದರ ಭಾರವಾಹಿಗಳಾದ ಡಾ। ಶಂಕರ್ ರಾಜ್, ಶ್ರೀ ಸುಕುಮಾರ ಆಲಂಪಾಡಿ, ವಿದುಷಿ ಶ್ರೀಮತಿ ರಾಧಾ ಮುರಳೀಧರ ಹಾಗೂ ಶ್ರೀಮತಿ ನಯನಾ ರಾಜ್ ಅವರು ಶತಾಯುಷಿ ಮೃದಂಗ ವಿದ್ವಾನ್ ಶ್ರೀ ಬಾಬು ರೈಯವರನ್ನು ಅವರ ಸ್ವಗೃಹದಲ್ಲಿ ಫಲ ತಾಂಬೂಲಗಳನ್ನು ನೀಡಿ ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ವಿದ್ವಾನ್ ಸದಾಶಿವ ಆಚಾರ್ ಹಾಗೂ ಶ್ರೀ ಬಾಬು ರೈ ಅವರ ಮಕ್ಕಳಾದ ಶ್ರೀ ಶ್ರೀಧರ್ ರೈ, ಶ್ರೀ ನಾರಾಯಣ ರೈ ಮತ್ತು ಮನೆಯವರು ಉಪಸ್ಥಿತರಿದ್ದರು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



**ಶ್ರೀ ಉಳ್ಳೂರು ವಾಸುದೇವ ರಾವ್** (74) ಇವರು ತಾ. 16–07–2023ನೇ ರವಿವಾರದಂದು ಉಡುಪಿಯಲ್ಲಿ ನಿಧನರಾದರು. ಇವರು ಮೂರು ಮಕ್ಕಳು, ಐದು ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ.

❖❖❖



**ಬೈಂದೂರು ನಾಗರಾಜ್ ರಾವ್** (78) ತಾ. 18–07–2023ನೇ ಮಂಗಳವಾರ ನಿಧನ ಹೊಂದಿದರು. ಇವರು ನಿವೃತ್ತ ಶಿಕ್ಷಕರು, ಯೋಗ ಶಿಕ್ಷಕರು ಹಾಗೂ ಸೇವಾಸಂಗಮ ಶಿಶುಮಂದಿರದ ಸಮಿತಿಯ ಸದಸ್ಯರಾಗಿದ್ದರು. ಇವರು ಮೂವರು ಪುತ್ರಿಯರು ಹಾಗೂ ಒಬ್ಬ ಪುತ್ರನನ್ನು ಅಗಲಿದ್ದಾರೆ.

❖❖❖



ಧರ್ಮಸ್ಥಳದ ಮಂಜುಶ್ರೀ ನಗರದ ನಿವಾಸಿ ಹಾಗೂ ದೇವಸ್ಥಾನದಲ್ಲಿ ಪಾಟಾಳಿ ಕೆಲಸವನ್ನು ಮಾಡುತ್ತಿರುವ ಶ್ರೀ ಸುಬ್ರಹ್ಮಣ್ಯ ರಾವ್ ಇವರ ಧರ್ಮಪತ್ನಿಯಾದ **ಶ್ರೀಮತಿ ರಂಜಿತಾ** ಇವರು ತಾ. 22–7–2023ನೇ ಶನಿವಾರ ನಿಧನ ಹೊಂದಿದರು.

❖❖❖



**ಶ್ರೀ ಪಾದೆಬೆಟ್ಟು ಶ್ರೀಕರ ರಾವ್** (79) ತಾ. 4–8–2023ನೇ ಶುಕ್ರವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

❖❖❖



ದಿ। ಡಾ। ಸದಾಶಿವ ಶರ್ಮರವರ ಧರ್ಮಪತ್ನಿ **ಶ್ರೀಮತಿ ಸ್ವರ್ಣಲತಾ ಶರ್ಮ** (83) ತಾರೀಕು 19–7–2023ನೇ ಬುಧವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಪತ್ರಿಕೆಗೆ ಶುಭ ಹಾರೈಸುವವರು–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ಧೃತಿ ಮತ್ತು ಧ್ರುವ್

ಪತ್ರಿಕೆಗೆ ಶುಭ ಹಾರೈಸುವವರು–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಬಿಜೈ, ಮಂಗಳೂರು

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಆಟಿತೊ ಆಟ ಕೂಟ'

ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರ್






















# ಶೃಂಗೇರಿ ಯಾತ್ರೆ



ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ 100ಕ್ಕೂ ಹೆಚ್ಚು ಸದಸ್ಯರು ತಾ. 13-08-2023ನೇ ರವಿವಾರ ಶೃಂಗೇರಿಗೆ ತೆರಳಿ ಜಗದ್ಗುರುಗಳ ಚಾತುರ್ಮಾಸ ಪ್ರಯುಕ್ತ ಅನುಗ್ರಹ ಭಾಷಣ, ಫಲ-ಮಂತ್ರಾಕ್ಷತೆ ಪಡೆದು ಧನ್ಯರಾದರು.

ಶ್ರೀ ಸಭಾ, ಯುವವೇದಿಕೆ, ಮಹಿಳಾ ವೇದಿಕೆ ಪದಾಧಿಕಾರಿಗಳು ಮತ್ತು ಸದಸ್ಯರು ಹೊರೆಕಾಣಿಕೆ ನೀಡಿ ವ್ಯವಸ್ಥೆಗಳಲ್ಲಿ ಸಹಕರಿಸಿದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್



Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher :* *Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor :* *Sri M. S. Raghunath Rao, Darbe, Puttur* *Printed at :* *Rajesh Power Press, Darbe - 574 202, Puttur, D. K.*